# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.22/2021**

**ದೋ.ಸಾ. : 03 ಫ್ರಾ.ಸಾ. : 07**

| | | |
|---|---|---|
| ಸಾಕ್ಷಿಯ ಹೆಸರು | : | ಮಹಮ್ಮದ ಅಖಿಲ್ ಅಬ್ದುಲ್ ಖಾದರ ಖಾಜಿ |
| ತಂದೆಯ ಹೆಸರು | : | ಅಬ್ದುಲ್ ಖಾದರ ಖಾಜಿ |
| ವಯಸ್ಸು | : | 50 ವರ್ಷ |
| ಕೆಲಸ | : | ಗ್ರಾಮ ಪಂಚಾಯತ್ ಸದಸ್ಯರು, ಚಂದಾವರ ಗ್ರಾಮ ಪಂಚಾಯತ್ |
| ವಾಸ | : | ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 04-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2021 ರಲ್ಲಿ ನಾನು ಚಂದಾವರ ಗ್ರಾಮ ಪಂಚಾಯತ್ ಗೆ ಜನತಾ ಕಾಲೋನಿಯಿಂದ ಚುನಾಯಿತ ಸದಸ್ಯನಾಗಿರುತ್ತೇನೆ. ದಿಃ 03-05-2021 ರಂದು ಸುಮಾರು ಮದ್ಯಾಹ್ನ ಸಮಯದಲ್ಲಿ ನಾನು ಕೆಲಸದ ಮೇಲೆ ಚಂದಾವರದಲ್ಲಿದ್ದಾಗ, ನನ್ನ ಗೆಳೆಯನಿಂದ ಕರೆ ಬಂದಿದ್ದು, ಅದರಲ್ಲಿ ಜನತಾ ಕಾಲೋನಿಯಲ್ಲಿ ಆರೋಪಿಯಾದ ಅಬ್ದುಲ್ ಸಲೀಂನು ಅಬುತಾಲಿಬ್‌ರನ್ನು ಕೊಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ. ವಿಷಯ ತಿಳಿದ ಕೂಡಲೇ ನಾನು ಸ್ಥಳಕ್ಕೆ ಹೋಗಿ ನೋಡಿದಾಗ, ಅದಾಗಲೇ ಅಬುತಾಲಿಬ್‌ರನ್ನು ಕುಮಟಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ನಂತರ ನಾನೂ ಸಹ ಕುಮಟಾ ಸರಕಾರಿ ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲಿ ಅಬುತಾಲಿಬ್ ರವರು ಮೃತಪಟ್ಟಿದ್ದರು.

2. ಆ ನಂತರ ಪೊಲೀಸರು ಆಸ್ಪತ್ರೆಯಲ್ಲಿ ನನಗೆ ಹಾಗೂ ಚಾಸಾ-2 ರವರಿಗೆ ಶವ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ಅದರಂತೆ ಸಂಜೆ 04-00 ರಿಂದ 05-30 ಗಂಟೆಗೆ ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿ, ಫೋಟೋಗಳನ್ನು ತೆಗೆದರು ಹಾಗೂ ನನ್ನ ಸಹಿಯನ್ನು ಪಡೆದುಕೊಂಡರು. ಮೃತ ಅಬುತಾಲಿಬ್ ರವರು ನಮ್ಮ ವಾರ್ಡಿನ ವಾಸಿಯಾಗಿದ್ದರಿಂದ, ಆತನನ್ನು ನಾನು ನೋಡಿ ಗುರುತಿಸಿರುತ್ತೇನೆ. ಅದೇ ರೀತಿ ಮೃತ ಅಬುತಾಲಿಬ್ ರವರ ಅಣ್ಣನ

ಮಗನಾದ ಚಾಸಾ–17 ರವರು ಹಾಜರಿದ್ದು, ಅಬುತಾಲಿಬ್ ರವರ ಶವವನ್ನು ನೋಡಿ ಗುರುತಿಸಿರುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ಶವದ ಮೈ ಮೇಲೆ ಪಿಂಕ್ ಬಣ್ಣದ ಅಂಗಿ, ಪಿಂಕ್ ಮತ್ತು ಕಂದು ಬಣ್ಣದ ಚೆಕ್ಸ್ ಲುಂಗಿ, ಕಡು ಪಿಂಕ್ ಬಣ್ಣದ ನಿಕ್ಕರ್ ಹಾಗೂ ಕೈಯಲ್ಲಿ ಕಪ್ಪು ದಾರ ಇತ್ತು. ಶವದ ಮೈ ಮೇಲೆ ಅಂಗಿಯನ್ನು ಬಿಚ್ಚಿ ನೋಡಿದಾಗ, ಎಡ ಎದೆಯ ಸ್ವಲ್ಪ ಕೆಳ ಭಾಗದಲ್ಲಿ ಚಾಕುವಿನಿಂದ ಚುಚ್ಚಿದ ಗುರುತು ಇತ್ತು ಹಾಗೂ ಶವದ ಮೈ ಮೇಲೆ ರಕ್ತ ಇತ್ತು. ಪೊಲೀಸರು ನೀಡಿದ ನೋಟಿಸ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು 28 ಎಂದು, ಸಾಕ್ಷಿಯ ಸಹಿಯನ್ನು ನಿಪಿ–28(ಎ) ಎಂದು, ಸಾಕ್ಷಿಯು ಶವ ಪಂಚಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–29 ಎಂದು, ಸಾಕ್ಷಿಯ ಸಹಿಯನ್ನು ನಿಪಿ–29(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ–11 ಪೋಟೊದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–12 ಪೋಟೊದಲ್ಲಿ ಅಬುತಾಲಿಬ್ ರವರ ಶವವನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–13 ಮತ್ತು 14 ಪೋಟೋಗಳಲ್ಲಿ ಚಾಕುವಿನಿಂದ ಹಲ್ಲೆ ಮಾಡಿದ ಗುರುತನ್ನು ನೋಡಿ ಗುರುತಿಸಿರುತ್ತಾರೆ.

3. ಮೃತ ಅಬುತಾಲಿಬ್ ರವರ ಮೈ ಮೇಲೆ ಇದ್ದ ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಲುಂಗಿಯನ್ನು ಈಗಾಗಲೇ ಮುದ್ದೆ ಮಾಲು–8 ಎಂದು, ಅಂಗಿಯನ್ನು ಈಗಾಗಲೇ ಮುದ್ದೆ ಮಾಲು–9 ಎಂದು, ನಿಕ್ಕರ್ ನ್ನು ಈಗಾಗಲೇ ಮುದ್ದೆ ಮಾಲು–10 ಎಂದು ಗುರುತಿಸಲಾಗಿರುತ್ತದೆ. ಶವ ಪಂಚನಾಮೆಯ ಸಮಯದಲ್ಲಿ ಮುದ್ದೆ ಮಾಲುಗಳಿಗೆ ರಕ್ತ ಕಲೆಗಳು ಇರುತ್ತವೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

ಸಾಕ್ಷಿಯು ತಾನು ರಂಜಾನ್ ಉಪವಾಸವಿರುವ ಕಾರಣ, ತನಗೆ ಸಾಕ್ಷ್ಯ ನುಡಿಯಲು ಸಾಧ್ಯವಾಗುತ್ತಿಲ್ಲ ಎಂದು ನುಡಿದಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ